**ಸಾಕ್ಷಿಯನ್ನು ದಿಃ17.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ಎಸ್. ಪುಟ್ಟಮ್ಮ ನನ್ನ ತಾಯಿ.

2. ದಾವಾ ಸ್ವತ್ತು ಎಸ್. ಪುಟ್ಟಮ್ಮ ರವರಿಗೆ ಯಾವ ರೀತಿ ಬಂದಿತು ಎಂದರೆ, ಅವರು ಸ್ವಂತ ಖರೀದಿ ಮಾಡಿದ್ದು.

3. ನಿಮ್ಮ ತಾಯಿ ವಿಲ್ ಬರೆದ ವಿಚಾರ ನಿಮಗೆ ಮೊದಲೇ ಗೊತ್ತಿತ್ತಾ ಇಲ್ಲವಾ ಎಂದರೆ, ಗೊತ್ತಿರಲಿಲ್ಲ. ಅವರು ಬರೆದ ವಿಲ್ ನಲ್ಲಿ ಏನು ಬರೆದಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ, ಈಗ ನೀವು ಹಾಜರುಪಡಿಸಿದ ನಂತರ ನೋಡಿ ತಿಳಿದುಕೊಂಡಿದ್ದೇನೆ. ನಮ್ಮ ತಾಯಿ ಯಾವುದೇ ವಿಲ್ ಮಾಡಿಲ್ಲ ಅವರು ಮರಣ ಹೊಂದುವವರೆಗೆ ನಮ್ಮ ಮನೆಯಲ್ಲಿ ಇದ್ದರು. ಅವರನ್ನು ಮೈಸೂರಿನ ಅರವಿಂದ ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ಮರಣ ಹೊಂದಿರುತ್ತಾರೆ. ಆ ಬಗ್ಗೆ ದಾಖಲೆ ಈಗ ತಂದಿಲ್ಲ. ಅವನ್ನು ಹಾಜರುಪಡಿಸಲು ತೊಂದರೆ ಇಲ್ಲ.

4. ನಿಮ್ಮ ತಾಯಿ ಎಸ್. ಪುಟ್ಟಮ್ಮ ಸಹಿ ಮಾಡಿದ್ದನ್ನು ನೋಡಿದ್ದೀರಾ ಎಂದರೆ, ನೋಡಿದ್ದೇನೆ. ಅವರು ಇದೇ ರೀತಿ ಸಹಿ ಮಾಡುತ್ತಿದ್ದರು ಎಂಬ ಬಗ್ಗೆ ಬೇರೆ ದಾಖಲೆ ನಿಮ್ಮ ಬಳಿ ಇದೆಯಾ ಎಂದರೆ, ಇಲ್ಲ.

5. ಎಸ್. ಪುಟ್ಟಮ್ಮ ರವರು 2020 ರಲ್ಲಿ ಮೃತರಾಗಿದ್ದಾರೆ. ಅವರ ಜೀವಿತ ಕಾಲದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ದಿಃ 22.12.1992 ರಂದು ನಿಮ್ಮ ಸಹೋದರರಾದ 2 ರಿಂದ 3 ರವರಿಗೆ ಹಾಗೂ 7 ರಿಂದ 10 ನೇ ಪ್ರತಿವಾದಿಯ ತಂದೆಗೆ ರವರ ಹೆಸರಿಗೆ ಮರಣ ಶಾಸನ ಬರೆದಿದ್ದಾರೆ ಎಂದರೆ ಸರಿಯಲ್ಲ.

6. ಎಸ್. ಪುಟ್ಟಮ್ಮ ರವರು ದಾವಾ ಸ್ವತ್ತು ಸ್ವಯಾರ್ಜಿತ ಆಸ್ತಿ ಆದ್ದರಿಂದ ಅವರು ಬದುಕಿರುವಾಗ ಅವರ ಗಂಡು ಮಕ್ಕಳಿಗೆ ಬರೆದುಕೊಡಬೇಕೆಂಬ ಇಚ್ಛೆ ಪ್ರಕಾರ ವಿಲ್ ಬರೆದು ಕೆ.ಎಲ್.ಮರಿಯಪ್ಪ ನವರ ಕಡೆಯಿಂದ ಬಿಕ್ಲಂ ಹಾಕಿಸಿ ಬರೆದಿದ್ದರು ಎಂದರೆ ಸರಿಯಲ್ಲ, ಅವರು ಸುಳ್ಳು ದಾಖಲೆ ಸೃಷ್ಠಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

7. ನಿಡಿ - 21 ರ ವಿಲ್ ನ್ನು ನಿಮ್ಮ ತಾಯಿಯೇ ಬರೆಸಿ ಅವರೇ ಖುದ್ದು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ, ನನ್ನ ತಾಯಿ ನನ್ನ ಬಳಿಯೇ ಇದ್ದರು.

8. ನಿಡಿ - 21 ವಿಲ್ ನ್ನು ದಿಃ 20.12.2004 ರ ಮುಂಚೆ ಬರೆದಿದ್ದರಿಂದ ನಿಮಗೆ ದಾವಾ ಆಸ್ತಿಯಲ್ಲಿ ಭಾಗಾಂಶದ ಹಕ್ಕಿಲ್ಲ ಎಂದರೆ ಸರಿಯಲ್ಲ.

9. ದಾವಾ ಆಸ್ತಿ ಜೊತೆಗೆ ಪುಟ್ಟಮ್ಮ ಹಾಗೂ ನಿಮ್ಮ ತಂದೆಗೆ ಏನೇನು ಆಸ್ತಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಬೇರೆ ಆಸ್ತಿ ಇತ್ತಾ ಎಂದರೆ, ಪುಟ್ಟಮ್ಮ ರವರಿಗೆ ಇರಲಿಲ್ಲ ನಮ್ಮ ತಂದೆಗೆ ಇದೆ, ಅದು ನಮ್ಮ ಅಣ್ಣಂದಿರಿಗೆ ಭಾಗ ಆಗಿದೆ.

10. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಿಮ್ಮ ಸಹೋದರರಿಗೆ ಸಹ ಭಾಗಾಂಶದ ಹಕ್ಕು ಇದೆ ಎಂದರೆ, ನಾವು ಜನರಿಗೂ ಭಾಗ ಮಾಡುವಂತೆ ಕೇಳಿದ್ದೇವೆ.

11. ಪುಟ್ಟಮ್ಮ ರವರು ಸ್ವಸ್ಥ ಮನಸ್ಸಿನಿಂದ ಹಾಗೂ ಆರೋಗ್ಯವಾಗಿದ್ದಾಗಲೇ ನಿಡಿ - 21ರ ವಿಲ್ ಬರೆದಿರುವುದರಿಂದ ದಾವಾ ಆಸ್ತಿ ಮೇಲೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ, ಅವರಿಗೆ 60 ವರ್ಷ ಆದಾಗಿನಿಂದಲೂ ನಮ್ಮ ಮನೆಯಲ್ಲಿಯೇ ವಾಸವಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆ ಇವೆಯಾ ಎಂದರೆ, ಇದೆ. ನ್ಯಾಯಾಲಯಕ್ಕೆ ಹಾಜರುಡಿಸಲು ತೊಂದರೆ ಇಲ್ಲ.

12. ನನ್ನ ತಂದೆ 1982 ರಲ್ಲಿ ಮೃತರಾಗಿದ್ದಾರೆ. ನಿಮ್ಮ ತಂದೆ ಮೃತರಾದ ನಂತರ ಅವರ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳು ನಿಮ್ಮ ತಾಯಿ ಪುಟ್ಟಮ್ಮ ರವರ ಹೆಸರಿಗೆ ವರ್ಗಾವಣೆಯಾಗಿವೆ ಎಂದರೆ, ಇಲ್ಲ ನಮ್ಮ ತಂದೆ ಇದ್ದಾಗಲೇ ವಿಭಾಗ ಆಗಿದ್ದವು ಎಂದು ನುಡಿಯುತ್ತಾರೆ.

13. ನಿಮ್ಮ ತಾಯಿ ವಿಲ್ ಬರೆದಿದ್ದರಿಂದ ನಿಮಗೆ ಯಾವುದೇ ಭಾಗಾಂಶ ಹಾಗೂ ಪರಿಹಾರ ಪಡೆದುಕೊಳ್ಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

14. ನಿಡಿ-21ರಲ್ಲಿ ನಿಮ್ಮ ತಾಯಿಯೇ ಸಹಿ ಮಾಡಿ ವಿಲ್ ಬರೆದಿದ್ದರೂ ಹೇಗಾದರೂ ಮಾಡಿ ಆಸ್ತಿ ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ದಾವಾ ಆಸ್ತಿ ಬಗ್ಗೆ ವಿಲ್ ಬರೆದಿದ್ದರೂ ಬರೆದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ